ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ 13ನೇ ನವೆಂಬರ್ 2000ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.08 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ : **(ಶ್ರೀ ಎಂ.ವಿ. ವೆಂಕಟಪ್ಪ)** ಅವರು ಪೀಠವನ್ನು ಅಲಂಕರಿಸಿದ್ದರು.

(ಸಭೆಯು 11 ಗಂಟೆ ಎಂಟು ನಿಮಿಷಕ್ಕೆ ಪ್ರಾರಂಭವಾಯಿತು)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ರಾಣೆಬೆನ್ನೂರಿನ ವಿಚಾರದಲ್ಲಿ ಮಾತನಾಡಬೇಕು ಎಂದು ತಮಗೆ ಸೂಚನೆ ಕಳಿಸಿದ್ದೇನೆ. ನಿನ್ನೆ ನಾನು ಅಲ್ಲಿ ವಿಸಿಟ್ ಮಾಡಿ ಬಂದಿದ್ದೇನೆ. ಅದರ ಬಗ್ಗೆ ನಂತರ ಪ್ರಸ್ತಾಪ ಮಾಡಲು ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಪ್ರಶ್ನೋತ್ತರದ ನಂತರ ಆ ವಿಚಾರವನ್ನು ನಾವು ತೆಗೆದುಕೊಳ್ಳೋಣ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಅಧ್ಯಕ್ಷರೆ, ಹಾ.ಮಾ. ನಾಯಕ್ ಅವರು ತೀರಿ ಹೋಗಿರುವುದರಿಂದ ಅವರ ಬಗ್ಗೆ ಒಂದು ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿದೆ. ಈ ನಾಡಿನ ಕನ್ನಡದ ಸಾಕ್ಷಿ, ಆತ್ಮಸಾಕ್ಷಿ ಆಗಿರುವಂತಹವರು ಅವರು.

ಅಧ್ಯಕ್ಷರು : ನೀವು ಅಂತಹದನ್ನು ಮೊದಲೇ ತಿಳಿಸಬೇಕಾಗಿತ್ತು. ಅಥವಾ ಬೆಳಿಗ್ಗೆ ದೂರವಾಣಿ ಮಾಡಬಹುದಿತ್ತು.

ಶ್ರೀ ಎಸ್. ಸುರೇಶ್‌ಕುಮಾರ್ : ನಾನು ಆಗಲೇ ಬಂದು ಹೇಳಿದೆ. ತಮ್ಮ ಕಛೇರಿಯವರಿಂದಲೇ ಆಗುತ್ತದೆ ಎಂದು ತಿಳಿದುಕೊಂಡಿದ್ದೆ.

ಅಧ್ಯಕ್ಷರು : ಆಯಿತು, ಕಾಂಟ್ರವರ್ಸಿ ಬೇಡಿ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಸಂತಾಪ ಸೂಚನೆ ಮಾಡುವುದು ಒಳ್ಳೆಯದು ಇದೆ. ದಯಮಾಡಿ ಅವಕಾಶ ಕೊಡಿ.

ಸಂತಾಪ ಸೂಚನಾ ನಿರ್ಣಯ

ಸಾರಸ್ವತ ಲೋಕದ ದಿಗ್ಗಜ ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಡಾ|| ಹಾ.ಮಾ. ನಾಯಕರು ದಿನಾಂಕ 10.11.2000ದಂದು ಮೈಸೂರಿನಲ್ಲಿ ನಿಧನರಾದರು. ಅವರಿಗೆ 69 ವರ್ಷ ವಯಸ್ಸಾಗಿತ್ತು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ಇವರು, ಜ್ಞಾನಪೀಠ ಪ್ರಶಸ್ತಿ, ಟಿ.ಎಸ್. ರಾಮಚಂದ್ರ ರಾವ್ ಪ್ರಶಸ್ತಿ ಸೇರಿದಂತೆ ಇನ್ನು ಅನೇಕ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಸಾಹಿತ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಗೆ 1982ರಲ್ಲಿ ರಾಜ್ಯ ಪ್ರಶಸ್ತಿ, 86ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಸಂಸ್ಕೃತಿ ಅಂಕಣ ಬರಹಕ್ಕೆ ಕೇಂದ್ರ ಸಾಹಿತ್ಯ ಪ್ರಶಸ್ತಿ ಪಡೆದ ಇವರು ಬೀದರ್‌ನಲ್ಲಿ 1985ರಲ್ಲಿ ನಡೆದ 57ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇವರು ನಮ್ಮ ಅಗಲಿದ್ದಾರೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಕನ್ನಡದ ಕಟ್ಟಾಳುವಾಗಿದ್ದ ಡಾ|| ಹಾ.ಮಾ. ನಾಯಕರು ಇವೊತ್ತು ನಮ್ಮೊಂದಿಗಿಲ್ಲ. ಡಾ|| ಹಾ.ಮಾ. ನಾಯಕರು ಕನ್ನಡ ಸಾರಸ್ವತ ಲೋಕದ ಒಬ್ಬ ಪ್ರತಿಭಾವಂತ ಲೇಖಕರಾಗಿದ್ದು, ವೈಚಾರಿಕ ಲೇಖನಗಳನ್ನು ಬರೆಯುವುದರಲ್ಲಿ ಇವರದು ಎತ್ತಿದ ಕೈ, ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಿಕ್ಕಿತ್ತು. ಕೆಲವರು ಪ್ರಶಸ್ತಿಗಳನ್ನು ಹುಡುಕಿಕೊಂಡು ಹೋದರೆ, ಡಾ|| ಹಾ.ಮಾ. ನಾಯಕರ ಪ್ರತಿಭೆ, ಲೇಖನಗಳನ್ನು ಕಂಡು ಪ್ರಶಸ್ತಿಯೇ ಅವರನ್ನು ಹುಡುಕಿಕೊಂಡು ಬಂತೆಂದರೆ ತಪ್ಪಾಗಲಾರದು. 10-15 ವರ್ಷಗಳ ಹಿಂದೆ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಂಥ ಸಂದರ್ಭದಲ್ಲಿ, ಅವರ ಯಾವ ಕೃತಿಗೆ ಈ ಪ್ರಶಸ್ತಿ ಅಕಾಡೆಮಿಯ ಪ್ರಶಸ್ತಿ ಬಂದಂಥ ಸಂದರ್ಭದಲ್ಲಿ, ಅವರ ಯಾವ ಕೃತಿಗೆ ಈ ಪ್ರಶಸ್ತಿ ಬಂತೆಂದು ಕೆಲವರು ಆಶ್ಚರ್ಯಚಕಿತರಾಗಿದ್ದರು ಮತ್ತೆ, ಬಹಳಷ್ಟು ಜನರು ಈ ಕುರಿತು ಟೀಕೆ ಮಾಡಿದ್ದರು. ಬಹುಶಃ ಕನ್ನಡ ಸಾಹಿತ್ಯ ಪ್ರಾಕಾರದಲ್ಲಿ 'ಅಂಕಣ ಸಾಹಿತ್ಯ'ವನ್ನು ಮೊದಲಿಗೆ ಪ್ರಾರಂಭಿಸಿದವರು ಹಾ.ಮಾ. ನಾಯಕರೆಂದರೆ ತಪ್ಪಾಗಲಾರದು. ಅಂಕಣ ಸಾಹಿತ್ಯವನ್ನು ಅವರು ಪ್ರಾರಂಭಿಸಿದಾಗ ಅದು ಅಷ್ಟು ಪ್ರಸಿದ್ಧಿಯಾಗಿರಲಿಲ್ಲ. ತದನಂತರ ಈ ಅಂಕಣ ಸಾಹಿತ್ಯ ಸಾರಸ್ವತ ಲೋಕದಲ್ಲಿ ತನ್ನ ಜನಪ್ರಿಯತೆ ಗಳಿಸಿಕೊಂಡಿತು. ಅಂಕಣ ಬರಹದ ಮೂಲಕ ಅವರು ಬಹಳ ಉತ್ಕೃಷ್ಟವಾದ, ಸೃಜನಶೀಲ ಸಾಹಿತ್ಯವನ್ನು ರಚಿಸಿದರು. ಸಮಾಜದಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಇನ್ನಿತರ ಯಾವುದೇ ಘಟನೆಗಳು ಜರುಗುತ್ತಿದ್ದರೂ ಅವರು ಸ್ಪಂದಿಸುತ್ತಿದ್ದರು ಮತ್ತು ಯಾವುದೇ ವ್ಯಕ್ತಿ ಸಮಾಜದ ಯಾವುದೇ ರಂಗದಲ್ಲಿದ್ದರೂ ಕೂಡ ಆ ಬಗ್ಗೆ ನಾಲ್ಕು ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದುದರ ಜೊತೆಗೆ ತಪ್ಪು-ಒಪ್ಪುಗಳನ್ನೂ ಸಹ ತಿಳಿಸುತ್ತಿದ್ದರು. ಅವರು ಬೇರೆ ಬೇರೆ ಪತ್ರಿಕೆಗಳಿಗೆ ಅಂಕಣ ಬರಹರಾಗಿದ್ದು, ಪ್ರತಿ ವಾರವೂ ಅವರ ಅಂಕಣ ಬರುತ್ತಿದ್ದುದನ್ನು ನಾವು ನೋಡುತ್ತಿದ್ದೆವು. ಅವರು ಅಂಕಣ ಬರಹಗಾರರಾಗಿ ಬಹಳ ಪ್ರಸಿದ್ಧಿ ಪಡೆದಿದ್ದರು. ಅವರ ಅಂಕಣ ಬರಹಗಳ 'ಸಂಪ್ರತಿ' ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ನೀಡಲಾಗಿತ್ತು. ಅವರ ಅಂಕಣ ಸಾಹಿತ್ಯಕ್ಕೆ ಪ್ರಶಸ್ತಿ ಬಂದಾಗ ಇಡೀ ಒಂದು ತಿಂಗಳ ಕಾಲ ಇಡೀ ಕರ್ನಾಟಕದಾದ್ಯಂತ ಆ ಕುರಿತು ಚಿಂತನೆ, ಚರ್ಚೆ ವ್ಯಾಪಕವಾಗಿ ನಡೆಯಿತು. ಅಂಕಣ ಬರಹ, ಇದು ಸಾಹಿತ್ಯವೇ? ಅಲ್ಲವೇ? ಎಂಬ ಬಗ್ಗೆ ಆ ಚರ್ಚೆ ನಡೆಯಿತು. ಅವರ ಅಂಕಣ ಬರಹಗಳ ಸಂಕಲನಕ್ಕೆ ಆ ಪ್ರಶಸ್ತಿ ಸಿಕ್ಕಿದೆಯೆಂದು ತಿಳಿದಾಗ ಕೊನೆಗೆ ಒಪ್ಪಿದರು. ಅವರು ತಮ್ಮ ಅನುಭವ, ಜಾಣ್ಮೆ ಹಾಗೂ ಪ್ರತಿಭೆಯನ್ನು ಕನ್ನಡ ಸಾಹಿತ್ಯಕ್ಕೆ ಸಾಕಷ್ಟು ರೀತಿಯಲ್ಲಿ ಧಾರೆಯೆರಿದ್ದಾರೆ.

ಅವರು ಇನ್ನು ಕೆಲವು ವರ್ಷಗಳ ಕಾಲ ನಮ್ಮ ಜೊತೆಗಿದ್ದಿದ್ದರೆ ಕನ್ನಡ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕೊಡುಗೆ ಕೊಡುವುದಕ್ಕೆ ಸಾಧ್ಯವಿತ್ತು. ಇವೊತ್ತು ಕನ್ನಡ ಸಾರಸ್ವತ ಲೋಕಕ್ಕೆ ಅವರು ಸಾಕಷ್ಟು ಕೊಡುಗೆಯಿತ್ತಿದ್ದಾರೆ. ಅವರ ವೈಚಾರಿಕ ಪ್ರತಿಭೆ ಕನ್ನಡ ಸಾಹಿತ್ಯದ ಅಭಿಮಾನಿಗಳಿಗೆ ಒಂದು ರೀತಿಯಲ್ಲಿ ಜ್ಞಾನದ ಅಡುಗೆಯಾಗಿತ್ತು ! ಅವರ ಅಗಲಿಕೆಯಿಂದ ಇವೊತ್ತು ಸಾಹಿತ್ಯ ಲೋಕ ಬಡವಾಗಿದೆ. ಒಬ್ಬ ಪ್ರತಿಭಾವಂತ ಲೇಖಕ ಇವೊತ್ತು ನಮ್ಮೊಂದಿಗಿಲ್ಲ. ಅವರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗಕ್ಕಾಗಿರುವ ದುಃಖದಲ್ಲಿ ನಾವೂ ಪಾಲ್ಗೊಳ್ಳೋಣ ಮತ್ತು ಆ ಮೂಲಕ ಅವರ ಆತ್ಮಕ್ಕೆ ಶಾಂತಿ ಕೋರಿ, ಮಾನ್ಯ ಅಧ್ಯಕ್ಷರು ಮಂಡಿಸಿರುವ ಸಂತಾಪ ಸೂಚಕ ನಿರ್ಣಯಕ್ಕೆ ನಾನು ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಡಾ॥ ಹಾ.ಮಾ. ನಾಯಕರು ಒಬ್ಬ ಒಳ್ಳೆಯ ಬರಹಗಾರ ಮತ್ತು ಸಾಹಿತಿಯಾಗಿದ್ದು, ಇಂತಹ ವ್ಯಕ್ತಿಯನ್ನು ಇವೊತ್ತು ನಾವು ಕಳೆದುಕೊಂಡಿದ್ದೇವೆ. ಬಹುಶಃ ಇದು ಅವರ ಅಕಾಲಿಕ ಸಾವು ಎಂದರೆ ತಪ್ಪಾಗಲಾರದು. ಏಕೆಂದರೆ, ಅವರೊಂದಿಗೆ ಸುಮಾರು 80-90 ವರ್ಷ ವಯಸ್ಸು ದಾಟಿರುವ ಅನೇಕ ಸಾಹಿತಿಗಳು ಕೂಡ ಇದ್ದಾರೆ. ಹಾ.ಮಾ. ನಾಯಕರು ಇನ್ನೂ ಹೆಚ್ಚು ಕಾಲ ಬದುಕಬಹುದೆನ್ನುವ ಆಸೆ ನಮ್ಮೆಲ್ಲರದಾಗಿತ್ತು. ನಾಯಕರ ಮತ್ತು ನನ್ನ ಸಂಪರ್ಕ ಹೇಗಾಯಿತೆಂದರೆ, ಅವರು ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಾಗಿ ಬಂದ ನಂತರ ಅನೇಕ ಬಾರಿ ಅವರನ್ನು ಭೇಟಿಯಾಗುವ ಸಂದರ್ಭವೊದಗಿತ್ತು. ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಬಗ್ಗೆ ಅವರಿಗಿದ್ದ ಆಸಕ್ತಿ ಅಷ್ಟಿಷ್ಟಲ್ಲ. ಅನೇಕ ಸಾರಿ ಅವರು ಹೇಳುತ್ತಿದ್ದರು. 'ಇತರೆ ವಿಶ್ವವಿದ್ಯಾನಿಲಯಗಳ ಅಭಿವೃದ್ಧಿಗಾಗಿ ಅಲ್ಲಿನ ಶಾಸಕರು, ಮಂತ್ರಿಗಳು ಹೋರಾಟ ಮಾಡಿ ಹೆಚ್ಚಿನ ಅನುದಾನ ತರುತ್ತಾರೆ. ಹಿಂದುಳಿದ ಭಾಗದಲ್ಲಿರುವ ಈ ಗುಲ್ಬರ್ಗ ವಿಶ್ವವಿದ್ಯಾನಿಲಯದ ಸರ್ವತೋಮುಖ ಅಭಿವೃದ್ಧಿಗಾಗಿ ನೀವು ಹೆಚ್ಚಿನ ಅನುದಾನಕ್ಕಾಗಿ ಗಮನ ಕೊಟ್ಟು ಪ್ರಗತಿ ಸಾಧಿಸಿ ಇದನ್ನೊಂದು ಮಾದರಿ ವಿಶ್ವವಿದ್ಯಾನಿಲಯವನ್ನಾಗಿ ರೂಪಿಸಬೇಕು.' ಎಂದು ಅವರು ನನ್ನೊಂದಿಗೆ ಅನೇಕ ಬಾರಿ ಹೇಳುತ್ತಿದ್ದರು. ನಾವೂ ಕೂಡ ನಮ್ಮ ಕೈಲಾದಷ್ಟು ಪ್ರಯತ್ನವನ್ನು ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಮಾಡಿದೆವು. ಆದರೆ, ಮಧ್ಯದಲ್ಲಿಯೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಹೋದರು. ಅಲ್ಲಿನ ಯಾರೋ ಕೆಲವರು ಸಿಂಡಿಕೇಟ್ ಮೆಂಬರ್ಸ್ ಅಥವಾ ಪ್ರೊಫೆಸರ್ಸ್ ವಿದ್ಯಾರ್ಥಿಗಳ ಜತೆಗೂಡಿ ಪ್ರತಿಭಟನಾ ಚಳುವಳಿ ಮಾಡಿದಂಥ ಸಂದರ್ಭದಲ್ಲಿ ಅವರನ್ನು ಬಹಿರಂಗವಾಗಿ ಉದ್ದೇಶಿಸಿ 'ನನಗೇನೂ ಇದರಲ್ಲಿ ಪಟ್ಟಭದ್ರ ಹಿತಾಸಕ್ತಿ ಇಲ್ಲ, ಅಥವಾ ನಾನು ಕೇಳಿಕೊಂಡು ಈ ಸ್ಥಾನಕ್ಕೆ ಬಂದಿಲ್ಲ, ಆಗದಿರುವಂತಾದ್ದನ್ನು ಮಾಡಿ ಎಂದು ಹೇಳುವುದಾಗಲಿ, ಅಥವಾ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆ ಮಾಡುವುದಾಗಲಿ ಅಥವಾ ವಿಶ್ವವಿದ್ಯಾನಿಲಯಕ್ಕೆ ಕೆಟ್ಟ ಹೆಸರು ತರುವ ಪ್ರಯತ್ನ ಮಾಡಿದಲ್ಲಿ ನಾನು ಇಲ್ಲಿರುವುದಕ್ಕೆ ಇಚ್ಛಿಪಟ್ಟಿಲ್ಲ ಮತ್ತು ಇಲ್ಲಿಯೇ ಇರಬೇಕೆಂದೂ ಬಂದಿಲ್ಲ, ನನ್ನ ಸೂಟ್‌ಕೇಸಿನಲ್ಲಿ ಎರಡು ಪೈಜಾಮ ಮತ್ತು ಶರ್ಟುಗಳಿದ್ದು ಅದನ್ನು ತೆಗೆದುಕೊಂಡು ವಾಪಸ್ಸು ಹೋಗುತ್ತೇನೆ' ಎಂದು ಪ್ರಾಮಾಣಿಕವಾಗಿ ಹೇಳುತ್ತಿದ್ದರು. ಅವರು ಶಿಸ್ತು ಮತ್ತು ನಿಷ್ಠುರತೆಯನ್ನು ಮೈಗೂಡಿಸಿಕೊಂಡವರಾಗಿದ್ದು ಅವರ ಮೇಲೆ ಪ್ರೊಫೆಸರ್‌ಗಳಿಗೆ ಮತ್ತು ವಿದ್ಯಾರ್ಥಿ ವೃಂದಕ್ಕೆ ವಿಶೇಷ ಅಭಿಮಾನವಿತ್ತು. ಈ ಕಾರಣದಿಂದಲೇ

ಪ್ರೊಫೆಸರ್‌ಗಳು ಮತ್ತು ವಿದ್ಯಾರ್ಥಿಗಳು ಹಾ.ಮಾ. ನಾಯಕರು ಹೇಳಿದ ಯಾವುದೇ ಮಾತನ್ನು ತಳ್ಳಿಹಾಕದೇ ಒಪ್ಪಿಕೊಳ್ಳುತ್ತಿದ್ದರೆಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾಯಕರು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದಂಥ ಸಾಹಿತಿಯಾಗಿದ್ದು, ಇವರು ಜ್ಞಾನಪೀಠ ಪ್ರಶಸ್ತಿ ಸಲಹಾ ಸಮಿತಿಯಲ್ಲೂ ಸದಸ್ಯರಾಗಿ ಕಾರ್ಯನಿರ್ವಹಿಸಿ ಖ್ಯಾತಿ ಪಡೆದಿದ್ದರು. ಇಂತಹ ಒಬ್ಬ ಸಾಹಿತಿಯನ್ನು ಇವೊತ್ತು ನಾವು ಕಳೆದುಕೊಂಡಿದ್ದು, ತಾವು ಮಂಡಿಸಿರುವ ಸಂತಾಪ ಸೂಚಕ ನಿರ್ಣಯವನ್ನು ಬೆಂಬಲಿಸಿ ಮೃತರ ಅಗಲಿಕೆಯಿಂದ ಅವರ ಕುಟುಂಬವರ್ಗದವರಿಗಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ಕೊಡಲೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಯಾರಾದರೂ ತೀರಿಕೊಂಡಾಗ 'ತುಂಬಾ ನಷ್ಟವಾಗಿದೆ' ಎಂದು ಹೇಳುವುದು ವಾಡಿಕೆ ಮತ್ತು ಸಂಪ್ರದಾಯ. ಆದರೆ, ಕೆಲವು ವ್ಯಕ್ತಿಗಳು ತೀರಿಕೊಂಡಾಗ ನಿಜವಾಗಿಯೂ ನಷ್ಟವಾಗಿದೆ ಎಂಬ ಭಾವನೆ ಬರುತ್ತದೆ. ಆ ನಷ್ಟ ಅವರ ಕುಟುಂಬಕ್ಕೆ, ಊರಿಗೆ ಇಲ್ಲವೇ ನಾಡಿಗಾಗಿರಬಹುದು. ಡಾ॥ ಹಾ.ಮಾ. ನಾಯಕರು ಇವೊತ್ತು ಏನು ನಿಧನರಾಗಿದ್ದಾರೆ, ಪ್ರಜಾವಾಣಿ ದಿನಪತ್ರಿಕೆಯ ಸಂಪಾದಕೀಯದಲ್ಲಿ 'ಕನ್ನಡದ ಸಾಕ್ಷಿಪ್ರಜ್ಞೆ' ಎಂಬ ಶೀರ್ಷಿಕೆಯಡಿ ಅವರನ್ನು ಕುರಿತು ಬರೆದಿದ್ದಾರೆ. ಆ ಸಾಕ್ಷಿಪ್ರಜ್ಞೆ ಇವೊತ್ತು ನಮ್ಮಿಂದ ದೂರವಾಗಿದೆಯೆಂದರೆ ತಪ್ಪಾಗಲಾರದು. ಈಗಾಗಲೇ ಸಾಕಷ್ಟು ವಿಚಾರಗಳನ್ನು ವಿರೋಧ ಪಕ್ಷದ ನಾಯಕರು ಮತ್ತು ಗೃಹಸಚಿವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರ ಹೇಳಬ್ಯಯಸುವುದೇನೆಂದರೆ, ಅವರ ಅಂಕಣ ಬರಹವನ್ನು ಸತತವಾಗಿ ಯಾರು ಓದುತ್ತಾ ಬಂದರೋ, ಆ ಅಂಕಣದ ಮೂಲಕ ನಮಗೆ ಅನೇಕ ವ್ಯಕ್ತಿಗಳ ಪರಿಚಯವಾಯಿತು. ಪ್ರಾಯಶಃ ಆ ಅಂಕಣ ಇಲ್ಲದಿದ್ದರೆ ಅನೇಕ ವ್ಯಕ್ತಿಗಳು ಅಜ್ಞಾತರಾಗಿ ಹಾಗೇ ಉಳಿದುಬಿಡುತ್ತಿದ್ದರು! ನಮಗೆ ಇಂತಹ ವ್ಯಕ್ತಿಗಳು ಇದ್ದಾರೆಯೇ? ಇಲ್ಲವೇ? ಎಂಬುದೂ ಗೊತ್ತಾಗುತ್ತಿರಲಿಲ್ಲ. 3-4 ವರ್ಷಗಳ ಹಿಂದೆ ಅವರ ಅಂಕಣದಲ್ಲಿ ಒಂದು ಸಂಗತಿ ಓದಿದ್ದೆ. ಅದು ನನ್ನ ಮನಸ್ಸಿನಲ್ಲಿ ಹಾಗೆಯೇ ಕುಳಿತಿದೆ, ಪದೇ ಪದೇ ಅದು ಜ್ಞಾಪಕಕ್ಕೆ ಬರುತ್ತಿದೆ. ಓರ್ವ ಮಹಿಳೆ ಡಾ॥ ಹಾ.ಮಾ. ನಾಯಕರಿಗೆ ಒಂದು ಪತ್ರ ಬರೆದಿದ್ದರಂತೆ ಏನೆಂದರೆ 'ನಾನು ಚಿಕ್ಕವಳಿದ್ದಾಗ ನನ್ನ ಕಣ್ಮುಂದೆ ನಿಜವಾದ ಅರ್ಥದಲ್ಲಿ ಗಣ್ಯ ವ್ಯಕ್ತಿಗಳೆನಿಸಿಕೊಂಡವರು ಓಡಾಡುತ್ತಿದ್ದರು. ರಕ್ತ, ಮಾಂಸ ಮತ್ತು ಮೂಳೆಗಳಿಂದ ಕೂಡಿದ ವ್ಯಕ್ತಿಗಳು ಓಡಾಡುತ್ತಿದ್ದರು. ನಾನು ದೊಡ್ಡವಳಾದ ಮೇಲೆ ಇವರ ತರಹವೇ ಆಗಬೇಕೆಂದು ನನಗನ್ನಿಸುತ್ತಿತ್ತು. ಇವೊತ್ತು ನನಗೊಬ್ಬ ಮೊಮ್ಮೊಗನಿದ್ದು, ಇವನನ್ನು ನಾನು ಯಾರಿಗೆ ತೋರಿಸಲಿ? ಯಾರನ್ನು ತೋರಿಸಿ ನೀನು ದೊಡ್ಡವನಾದ ಮೇಲೆ ಈ ವ್ಯಕ್ತಿ ತರಹವೇ ಆಗು ಎಂದು ಹೇಳಲಿ? ಎಂದು ಆ ವೃದ್ಧೆ ಪತ್ರ ಬರೆದಿದ್ದಳು ನಂತರ ನಾಯಕರು ತಮ್ಮ ಲೇಖನವನ್ನು ಮುಂದುವರೆಸುತ್ತಾರೆ. ಆ ವೃದ್ಧೆಯ ಸಂಕಟ ಪ್ರಾಯಶಃ ಈ ಸಮಾಜದ ಎಲ್ಲರ ಸಂಕಟವೂ ಆಗಿದೆ. ಅವರು ಹೇಳುತ್ತಾರೆ, ಶಾಲೆಯಲ್ಲಿ ನಾವು ಮಕ್ಕಳಿಗೆ ಕಾಪಿ ಬರೆಸುತ್ತೇವೆ. ಕಾಪಿ ಬರೆಸುವ ಉದ್ದೇಶ ಮಕ್ಕಳ ಕೈಬರವಣಿಗೆ ಗುಂಡಗಿರಲಿ ಎಂಬುದು. ಮೇಲುಗಡೆಯಲ್ಲಿ ಒಂದು ಸಾಲು ಇರುತ್ತದೆ. ಆ ಸಾಲಿನಲ್ಲಿ ಗುಂಡಗಿರುವ ಅಕ್ಷರದಲ್ಲಿ ಒಳ್ಳೆಯ ವಿಚಾರವನ್ನು ಬರೆದಿರುತ್ತಾರೆ. ಮಕ್ಕಳು ಅದನ್ನು ನೋಡಲಿ, ಅದನ್ನು ನೋಡಿ ಅದರಂತೆ ಮಕ್ಕಳು ಅಕ್ಷರವನ್ನು ಗುಂಡಾಗಿ ಬರೆಯಬೇಕು ಮತ್ತು ಒಳ್ಳೆಯ ವಿಚಾರಗಳು ಅವರ

ಮನಸ್ಸಿಗೆ ಹೋಗಬೇಕೆಂಬುದೇ ನಮ್ಮ ಅನಿಸಿಕೆ. ಆ ಮೇಲ್ಗಡೆಯ ಸಾಲನ್ನು ಮೇಲ್ಪಂಕ್ತಿ ಎಂದು ಕರೆಯುತ್ತಾರೆ. ಮೇಲುಪಂಕ್ತಿ ಒಳ್ಳೆಯ ರೀತಿಯಿಂದ ಕೂಡಿದ್ದರೆ ಕೆಳಗಡೆಯ ಪಂಕ್ತಿಗಳು ಸಹ ಒಳ್ಳೆಯ ವಿಚಾರವಾಗಬಹುದು ಎಂದು ಅನಿಸಿಕೆ. ಮೇಲ್ಪಂಕ್ತಿಯೇ ವಕ್ರವಕ್ರವಾಗುತ್ತಿದೆಯೆಂದು ಅವರು ತಮ್ಮ ಆತಂಕವನ್ನು ವ್ಯಕ್ತ ಮಾಡಿದ್ದಾರೆ. ಈ ವಿಚಾರವು ನನ್ನಲ್ಲಿ ಸದಾ ಕೊರೆಯುತ್ತಿದೆ. ಅವರು ಒಬ್ಬ ಭಾಷಾತಜ್ಞರಾಗಿ, ಸಾಹಿತಿಯಾಗಿ, ಆಡಳಿತಗಾರರಾಗಿ, ಪ್ರಾಯಶಃ ಇಂದು ಕನ್ನಡವೆಂದು ಯಾರು ಹಂಬಲಿಸುತ್ತಾರೆ ಅವರಿಗೆಲ್ಲ ಹತ್ತಿರದವರಾಗಿ ಇದ್ದಂಥ ಹಾ.ಮಾ. ನಾಯಕ್‌ರವರೇನು ತೀರಿಕೊಂಡಿದ್ದಾರೆ ಅವರ ನೆನಪು, ಮೌಲ್ಯಗಳು ನಮಗೆ ದಾರಿದೀಪವಾಗಬೇಕೆಂದು ಆಶಿಸುತ್ತ, ಅವರ ನಿಧನಕ್ಕಾಗಿ ಇವತ್ತೇನು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ ಅದರಲ್ಲಿ ನಾನೂ ಸಂಪೂರ್ಣವಾಗಿ ಪಾಲ್ಗೊಳ್ಳುತ್ತೇನೆ.

+ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಅಧ್ಯಕ್ಷರೆ, ಮಾನ್ಯ ಹಾ.ಮಾ. ನಾಯಕರ ನಿಧನದ ಬಗೆಗಿನ ಸಂತಾಪ ಸೂಚನೆಯ ನಿರ್ಣಯವನ್ನೇನು ಇಲ್ಲಿ ತಂದಿದ್ದೀರಿ ಅದಕ್ಕೆ ನನ್ನ ಸಹಮತವನ್ನು ವ್ಯಕ್ತಮಾಡಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಹಾ.ಮಾ. ನಾಯಕರು ಕೇವಲ ಕನ್ನಡ ನಾಡಿಗಷ್ಟೇ ಅಲ್ಲ ರಾಷ್ಟ್ರದ ಒಬ್ಬ ಧೀಮಂತ ಸಾಹಿತಿ, ವಿಮರ್ಶಕರಾಗಿದ್ದರು. ತಮ್ಮದೇ ಆದಂಥ ಸಾಹಿತ್ಯದ ಮೂಲಕ, ಚಿಂತಕರಾಗಿ, ಆದರ್ಶ ವಿಮರ್ಶಕರಾಗಿ ಕನ್ನಡ ನಾಡಿಗೆ ಅನೇಕ ಕೊಡುಗೆಗಳನ್ನು ಕೊಡುವುದರ ಮೂಲಕ ಅನೇಕ ಪ್ರಶಸ್ತಿಗಳನ್ನು ಅವರು ಪಡೆದುಕೊಂಡಿದ್ದಾರೆ. ಈ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದಿದ್ದಾವೆಯೇ ಹೊರತು ಅನೇಕರಂತೆ ಅವರು ಪ್ರಶಸ್ತಿಯನ್ನು ಹುಡುಕಿಕೊಂಡು ಹೋಗಿರಲಿಲ್ಲ. ಅವರ ಜೀವನವೇ ಆದರ್ಶವಾದ ಜೀವನ. ಎಲ್ಲರ ಮೇಲೆ ಪರಿಣಾಮವನ್ನು ಉಂಟುಮಾಡುವಂಥ ಬದುಕು ಅವರದಾಗಿತ್ತು. ಸಾದಾ, ಮತ್ತು ಗಾಂಧಿವಾದಿಯಾಗಿ ಅನೇಕ ಆದರ್ಶಗಳನ್ನಿಟ್ಟುಕೊಂಡು ಜೀವನ ಮಾಡಿಕೊಂಡು ಬಂದಂಥವರು. ರಾಷ್ಟ್ರದ ಅತ್ಯುನ್ನತ ಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿಯನ್ನು ಪಡೆಯಲು ಅರ್ಹರಾಗಿದ್ದಂಥವರು. ಕರ್ನಾಟಕದ ಅನೇಕ ವಿಶ್ವವಿದ್ಯಾನಿಲಯಗಳಿಗೆ ಮಾದರಿಯಾದ ವಿಚಾರಗಳನ್ನು ಕೊಟ್ಟಿದ್ದರು. ಹಿಂದುಳಿದ ಪ್ರದೇಶದಲ್ಲಿರುವ ಗುಲ್ಬರ್ಗಾ ವಿಶ್ವವಿದ್ಯಾನಿಲಯವನ್ನು ಒಂದು ಆದರ್ಶವಾದ ವಿಶ್ವವಿದ್ಯಾನಿಲಯವನ್ನಾಗಿ ಮಾಡಬೇಕು ಎಂಬ ಕನಸು ಇಟ್ಟುಕೊಂಡಿದ್ದರು. ತಮ್ಮ ಆ ಉದ್ದೇಶವನ್ನು ಈಡೇರಿಸಲು ಸಾಧ್ಯವಾಗದೆ, ಯಾವುದೇ ರಾಜಿ ಮಾಡಿಕೊಳ್ಳದೆ ರಾಜೀನಾಮೆ ಕೊಟ್ಟು ಹೊರಕ್ಕೆ ಬಂದಂಥವರು. ಇವತ್ತು ಅನೇಕ ಜನರು ಅಧಿಕಾರಕ್ಕಾಗಿ, ಸ್ಥಾನಕ್ಕಾಗಿ ಯಾರ್ಯಾರದೋ ಬೆನ್ನುಹತ್ತಿ ಹೋಗುತ್ತಿರುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಆದರೆ ಹಾ.ಮಾ. ನಾಯಕರು ಆ ರೀತಿ ಎಂದೂ ಹೋದವರಲ್ಲ. ಇಂಥ ಧೀಮಂತ ನಾಯಕರ ಅಗಲಿಕೆಯಿಂದ ಕನ್ನಡ ಸಾಹಿತ್ಯಕ್ಕೆ ಬಹಳ ಹಾನಿಯಾಗಿದೆ. ಇವರು ನಮ್ಮ ಜೊತೆಗೆ ಇನ್ನೂ ಹಲವಾರು ವರ್ಷಗಳ ಕಾಲ ಇರಬೇಕಾಗಿತ್ತು. ಈ ನಾಡಿನ, ರಾಷ್ಟ್ರದ ಉನ್ನತಿಯಲ್ಲಿ ಅವರ ಪಾಲು ಸಾಕಷ್ಟು ಇತ್ತು. ಅವರು ನಾಡಿನ ಉನ್ನತಿಗಾಗಿ ಇನ್ನೂ ಅನೇಕ ಕನಸುಗಳನ್ನು ಇಟ್ಟುಕೊಂಡಿದ್ದರು. ಆದರೆ ದೇವರು ಅದಕ್ಕೆ ಅವಕಾಶ ಕೊಡಲಿಲ್ಲ. ಅವರ ಅಗಲಿಕೆಯಿಂದ ಆಗಿರುವ ನಷ್ಟದಲ್ಲಿ ನಾನೂ ಸಹ ಪಾಲುಗೊಂಡು ಅವರ ಆತ್ಮಕ್ಕೆ ದೇವರು ಶಾಂತಿ ಕೊಡಲಿ ಎಂದು ಬೇಡುತ್ತ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಡಾ॥ ಹಾರೋಗದ್ದೆ ಮಾನಪ್ಪ ನಾಯಕರು ನಮ್ಮ ತೀರ್ಥಹಳ್ಳಿ ಕ್ಷೇತ್ರದವರು. ಈ ದೇಶದ ನಾಡು ನುಡಿ ಸಾರ್ವಜನಿಕ ಜೀವನಕ್ಕೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿರುವ ಮಣ್ಣು ತೀರ್ಥಹಳ್ಳಿಯ ಮಣ್ಣು. ಕುವೆಂಪು, ಎಸ್.ವಿ. ಪರಮೇಶ್ವರಭಟ್ಟರು, ಡಾ॥ ಹಾ.ಮಾ. ನಾಯಕರು, ಗೋಪಾಲಗೌಡರು, ಕಡಿದಾಳ್ ಮಂಜಪ್ಪನವರು, ಯು.ಆರ್. ಅನಂತಮೂರ್ತಿಯವರು ಈ ರೀತಿ ಅನೇಕ ಗಣ್ಯರನ್ನು ಈ ನಾಡಿಗೆ ಕೊಟ್ಟಿರುವಂಥದ್ದು. ನ್ಯಾಯಾಂಗದಲ್ಲಿ, ರಾಮಾಜೋಯಿಸ್, ಎನ್.ಡಿ. ವೆಂಕಟೇಶ್‌ರವರು ಇವರೆಲ್ಲರು ತೀರ್ಥಹಳ್ಳಿ ಕ್ಷೇತ್ರದವರು. ಅವರುಗಳು ಹುಟ್ಟಿರುವ ಭೂಮಿಯಲ್ಲಿ ನಮಗೂ ದೇವರು ಜನ್ಮವನ್ನು ಕೊಟ್ಟಿದ್ದಾನೆಂದು ಸಂತೋಷಪಡುತ್ತಾ, ಅವರುಗಳೆಲ್ಲರು ಬಹಳ ಎತ್ತರದ ಬದುಕನ್ನು ಮಾಡಿದ್ದಾರೆ. ಇತ್ತೀಚೆಗೆ ಎಸ್.ವಿ. ಪರಮೇಶ್ವರಭಟ್ಟರನ್ನು ಕಳೆದುಕೊಂಡೆವು, ಮೊನ್ನೆ ದಿವಸ ಡಾ॥ ಹಾ.ಮಾ. ನಾಯಕರನ್ನು ಕಳೆದುಕೊಂಡೆವು. ಈ ನಾಡಿಗೆ, ನುಡಿಗೆ, ಶೈಕ್ಷಣಿಕ ಕ್ಷೇತ್ರಕ್ಕೆ ಸಮರ್ಪಕವಾದ ಬದುಕು ಅವರುಗಳದ್ದಾಗಿತ್ತು. ತೀರ್ಥಹಳ್ಳಿಯಲ್ಲಿ ಆ ಮಟ್ಟದ ಶಿಕ್ಷಣವನ್ನು ಮುಗಿಸಿ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾಗಿ, ಕೇರಳದ ಮಹತ್ಮಾಗಾಂಧಿ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾಗಿ, ಸಾಹಿತ್ಯ ಕ್ಷೇತ್ರದಲ್ಲಿ ಅಂಕಣಬರಹಗಾರರಾಗಿ ತುಂಬಾ ಕೊಡುಗೆಯನ್ನು ಕೊಟ್ಟಿರುವ ಹಾ.ಮಾ. ನಾಯಕರು ನಮ್ಮನ್ನು ಅಗಲಿದ್ದಾರೆ. ಮೊನ್ನೆ ದಿವಸ ಅವರ ಶವವು ಮೈಸೂರಿನಿಂದ ನಮ್ಮ ಊರಿಗೆ ತರಬೇಕಾದರೆ ಬಹಳ ಸಮಯವನ್ನು ತೆಗೆದುಕೊಂಡಿತು. ಕಾರಣ, ಇಡೀ ನಾಡಿನ ಉದ್ದಗಲಕ್ಕೂ ಡಾ॥ಹಾ.ಮಾ. ನಾಯಕರ ಕೆಲಸದ ಬಗ್ಗೆ ಗೌರವವನ್ನು ತಾಳಿರುವ ಜನರು ಅವರ ಅಂತಿಮ ದರ್ಶನಕ್ಕಾಗಿ ಕಾದಿದ್ದು ಅವರ ಅಂತಿಮ ದರ್ಶನವನ್ನು ಪಡೆದರು. ಅವರ ಶವವು ರಾತ್ರಿ ಹತ್ತೂವರೆ ಗಂಟೆಗೆ ಹಾರೋಗದ್ದೆಗೆ ಬಂದು ತಲುಪಿತು. ಅಲ್ಲೂ ಸಾವಿರಾರು ಜನರು, ಸರ್ಕಾರಿ ಅಧಿಕಾರಿಗಳು, ಗಣ್ಯರು, ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಿದಂಥವರು ತುಂಬಾ ದೂರ ದೂರದಿಂದ ಬಂದು ಅವರ ಕೊನೆಯ ದರ್ಶನವನ್ನು ಪಡೆದರು. ಡಾ॥ ಹಾ.ಮಾ. ನಾಯಕರ ನಿಧನದಿಂದ ನಾಡಿಗೆ, ಶಿಕ್ಷಣ ಕ್ಷೇತ್ರಕ್ಕೆ ತುಂಬಾ ನಷ್ಟವಾಗಿರುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಲೇ ಬೇಕಾಗಿದೆ. ಅವರ ಅಗಲಿಕೆಯಿಂದ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದ ಎಲ್ಲಾ ಸದಸ್ಯರಿಗೂ ದೇವರು ಕೊಡಲಿ ಎಂದು ಹಾರೈಸಿ ತಾವು ತಂದಿರುವ ಸಂತಾಪ ಸೂಚಕ ನಿರ್ಣಯಕ್ಕೆ ಆ ಕ್ಷೇತ್ರದ ಶಾಸಕನಾಗಿ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಮಾಡಿ ನನ್ನ ನಮನವನ್ನು ವ್ಯಕ್ತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ (ಬೀರೂರು) : ಮಾನ್ಯ ಅಧ್ಯಕ್ಷರೆ, ಡಾ॥ ಹಾ.ಮಾ. ನಾಯಕ್‌ರವರು ನಮ್ಮಿಂದ ಅಗಲಿದ್ದಾರೆ. ಆದರೆ ಅವರು ಬಿಟ್ಟು ಹೋಗಿರುವ ಸಾಹಿತ್ಯ ಭಂಡಾರವೇನಿದೆ ಅದು ಅಗಾಧವಾಗಿದೆ. ಅದರ ಅಧ್ಯಯನವನ್ನು ಮಾಡುವ ಕೆಲಸವನ್ನು ನಾವು ಮಾಡಿದರೆ ಅವರಿಗೆ ನಿಜವಾಗಿಯೂ ಶ್ರದ್ಧಾಂಜಲಿಯನ್ನು ಅರ್ಪಿಸುವ ವಿಷಯವಾಗುತ್ತದೆ. ಕನ್ನಡ ಸಾಹಿತ್ಯಕ್ಕೆ, ಶಿಕ್ಷಣ ಕ್ಷೇತ್ರದಲ್ಲಿ, ಅದರಲ್ಲೂ ವಿದ್ಯಾರ್ಥಿಗಳಿಗಾಗಿ ಅವರು ಮಾಡಿರುವ ಸೇವೆ ಅನನ್ಯ. ಅವರು ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಮಾಡುತ್ತಿದ್ದಂಥ ಸಂದರ್ಭದಲ್ಲಿ ನಾವು ಅನೇಕ ಸಮಸ್ಯೆಗಳನ್ನು ತೆಗೆದುಕೊಂಡು ಹೋಗುತ್ತಿದ್ದೆವು. ಯಾರೂ ಬಗೆಹರಿಸದಿರುವ ಸಮಸ್ಯೆಗಳನ್ನು ಡಾ॥ಹಾ.ಮಾ. ನಾಯಕರು

ಬಗೆಹರಿಸಿಕೊಡುತ್ತಿದ್ದರು ಎಂಬುದನ್ನು ಇಂದು ನೆನಪಿಸಿಕೊಳ್ಳುತ್ತೇನೆ. ಅವರ ಅಗಲಿಕೆಯಿಂದ ಅವರ ಕುಟುಂಬಕ್ಕೆ ಮಾತ್ರವಲ್ಲ ನಾಡಿಗೆ, ಕನ್ನಡ ಸಾಹಿತ್ಯಕ್ಕೆ ಬಹಳ ನಷ್ಟವಾಗಿದೆ. ಇಂಥ ಧೀಮಂತ ವ್ಯಕ್ತಿಗೆ ವೈಯಕ್ತಿಕವಾಗಿ ಮತ್ತು ಎಲ್ಲರ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತ ತಾವು ತಂದಿರುವ ಸಂತಾಪ ನಿರ್ಣಯಕ್ಕೆ ನಮ್ಮ ಪಕ್ಷದ ವತಿಯಿಂದಲೂ ಬೆಂಬಲವನ್ನು ಸೂಚಿಸುತ್ತೇನೆ.

ಅಧ್ಯಕ್ಷರು : ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕಾಗಿ ಕೋರುತ್ತೇನೆ.

(ಸದನವು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು : ಈ ನಿರ್ಣಯವನ್ನು ಮೃತರ ಕುಟುಂಬಕ್ಕೆ ಕಳುಹಿಸಿ ಕೊಡಲಾಗುವುದು. ಈಗ ಪ್ರಶ್ನೋತ್ತರಗಳು.

ಪ್ರಶ್ನೋತ್ತರ

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರೋಣದಲ್ಲಿ ಅಡಿಷನಲ್ ಸಿವಿಲ್ ನ್ಯಾಯಾಲಯ

574 - ಶ್ರೀ ಗುರುಪಾದ ಗೌಡ ಸಂಗನಗೌಡ ಪಾಟೀಲ್ (ರೋಣ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗದಗದಲ್ಲಿ ಈಗಾಗಲೇ ಜಿಲ್ಲಾ ನ್ಯಾಯಾಲಯ ಆರಂಭಿಸಲಾಗಿರುವುದು ನಿಜವಲ್ಲವೇ?*

ಆ) *ರೋಣ, ನರಗುಂದ ಭಾಗದ ಜನತೆಗೆ ಅನುಕೂಲವಾಗುವ ದೃಷ್ಟಿಯಿಂದ ರೋಣದಲ್ಲಿ ಅಡಿಷನಲ್ ಸಿವಿಲ್ ಜಡ್ಜ್ ನ್ಯಾಯಾಲಯ ಆರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ಹೌದು, ದಿನಾಂಕ 30.9.2000ದಲ್ಲಿ ಗದಗ್ ಜಿಲ್ಲಾ ನ್ಯಾಯಾಲಯ ಪ್ರಾರಂಭವಾಗಿದೆ.

ಆ) ಸರ್ಕಾರದ ಮಟ್ಟದಲ್ಲಿ ಇಂತಹ ಪ್ರಸ್ತಾವನೆ ಇರುವುದಿಲ್ಲ.

11.30 ಎ.ಎಂ.

ಶ್ರೀ ಗುರುಪಾದಗೌಡ ಸಂಗನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ, ರೋಣದಲ್ಲಿ ಮತ್ತೊಂದು ಅಡಿಷನಲ್ ಸಿವಿಲ್ ಕೋರ್ಟ್ ಅನ್ನು ಅಲ್ಲಿಯ ಜನತೆಯ ಹಿತದೃಷ್ಟಿಯಿಂದ ಆರಂಭಿಸಬೇಕೆಂದು ಇವತ್ತು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತಿದ್ದೇನೆ. ರೋಣ ಮತ್ತು ನರಗುಂದ